ಶ್ರೀ ಎಸ್. ರುದ್ರಪ್ಪ : ಅಲೆಮಾರಿ ಜನರು ಖಾಯಂ ನಿವಾಸಿಗಳಲ್ಲವೆಂದು ಹೇಳಿದ್ದಾರೆ. ಅವರಿಗೆ ಜಮೀನು ಕೊಡಬೇಕಾದರೆ, ಅವರಿಗೆ ನಿವೇಶನ ಕೊಡಬೇಕಾದರೆ, ಯಾವ ರೀತಿ ಅವರನ್ನು ಗುರುತಿಸಿ, ಸರ್ಕಾರದವರು ಅವರಿಗೆ ಯಾವ ರೀತಿ ಸವಲತ್ತುಗಳನ್ನು ಕೊಡುತ್ತಾರೆ ಎಂದು ಸಚಿವರನ್ನು ಕೇಳುತ್ತೇನೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾವು ಹೇಳುವುದೇನೆಂದರೆ, ನೊ ಮ್ಯಾಡಿಕ್‌ಟ್ರೈಬ್ಸ್‌ನವರು ಎಲ್ಲಾದರೂ ಒಂದು ಕಡೆ ಸೆಟಲ್ ಆಗಿ ಎನ್‌ಕ್ರೋಚ್ ಮಾಡಿದರೆ ಅವರಿಗೂ ಕೂಡ ಕಾನೂನಿನ ಪ್ರಕಾರ ರೆಗ್ಯುಲರೈಸ್ ಮಾಡಿ ಕೊಡುತ್ತೇವೆ. ಅಥವಾ ಅವರು ಯಾವುದಾದರೂ ಒಂದು ಕಡೆ ಖಾಯಂ ಆಗಿ ಉಳಿದುಕೊಂಡು, ಸೈಟ್ಸ್‌ನ್ನು ಕೇಳಿದರೆ, ಬೇರೆಯವರಿಗೆ ಯಾವ ರೀತಿ ಹಂಚುತ್ತೇವೋ ಅದೇ ರೀತಿ ಅವರಿಗೂ ಹಂಚುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ ೨೪೪೪ ಆರ್‌ಡಿಪಿಆರ್‌ಗೆ ವರ್ಗಾವಣೆಯಾಗಿದೆ ಏಕೆಂದರೆ ನಿವೇಶನದ ಹಂಚಿಕೆಯ ವಿಷಯವು ರೂರಲ್ ಡೆವಲಪ್‌ಮೆಂಟ್‌ಗೆ ಸೇರುತ್ತದೆ.

ಉಪಾಧ್ಯಕ್ಷರು: ಮುಂದೆ ತಮಗೆ ಪ್ರಶ್ನೆಯನ್ನು ಹಾಕಲು ಅವಕಾಶ ಕೊಡುತ್ತೇನೆ.

ರಾಜ್ಯದಲ್ಲಿ ರೈತರ ಹಿತದೃಷ್ಟಿಯಿಂದ ಕೋಳಿ ಮೊಟ್ಟೆ ಮಂಡಳಿ ಸ್ಥಾಪನೆ

೨೫೩೩. ಶ್ರೀ ಕೆ.ಹೆಚ್. ಹನುಮೇಗೌಡರು (ಹಾಸನ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೋಳಿ ಸಾಕಾಣಿಕೆಯು ರೈತರ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ 'ಎಗ್' ಬೋರ್ಡ್ (ಎಗ್)ನ್ನು ಸ್ಥಾಪಿಸಲು ಆಲೋಚಿಸಿದೆಯೇ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು)

ಅ) ಇಲ್ಲ ಆದರೆ ಒಂದು ಕೋಳಿ ಮಾರಾಟ ನಿಗಮವನ್ನು ಸ್ಥಾಪಿಸುವ, ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಸನ್ಮಾನ್ಯ ಉಪಾಧ್ಯಕ್ಷರೇ, ಹಿಂದೆ ಈ ಸದನದಲ್ಲಿ ಹಿಂದಿನ ಪಶುಸಂಗೋಪನಾ ಇಲಾಖೆಯ ಮಂತ್ರಿಗಳು ಎಗ್ ಬೋರ್ಡ್‌ನ್ನು ಪ್ರಾರಂಭಿಸುತ್ತೇವೆಂದು ಎರಡು ಮೂರು ಸಾರಿ ಹೇಳಿದ್ದರು. ಆದರೆ ಇದುವರೆಗೂ ಏಕೆ ಪ್ರಾರಂಭವಾಗಲಿಲ್ಲ ಎಂದು ನಾನು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ಕೋಳಿ ಮಾರಾಟ ನಿಗಮವನ್ನು ಸ್ಥಾಪಿಸುವುದು ಪರಿಶೀಲನೆಯಲ್ಲಿ ಇದೆ ಎಂದು ಹೇಳಿದ್ದಾರೆ. ಕೋಳಿ ಮಾರಾಟ ನಿಗಮವನ್ನು ಮಾಡಬೇಕು ಎಂದು ಹೇಳಿದರಲ್ಲಾ ಇದರ ರೂಪರೇಖೆಗಳು ಏನು? ಮೊದಲು ಕೋಳಿ ಮೊಟ್ಟೆ ಬೋರ್ಡ್ ಮಾಡುತ್ತೇವೆಂದು ಹೇಳಿದ್ದರಲ್ಲಾ ಅದನ್ನು ಬಿಟ್ಟು ಇದನ್ನು ಮಾಡುವುದಕ್ಕೆ ಏನು ಕಾರಣ? ಇದರ ವ್ಯತ್ಯಾಸವೇನು? ಇದರ ರೂಪುರೇಶೆಗಳನ್ನು ಸ್ವಲ್ಪ ದಯವಿಟ್ಟು ತಿಳಿಸಿ.

ಶ್ರೀ ಬಸವರಾಜ್ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹಿಂದಿರತಕ್ಕಂಥ ಮಂತ್ರಿಗಳು ಎಗ್ ಬೋರ್ಡ್ ಮಾಡುತ್ತೇವೆಂದು ಹೇಳಿದ್ದರು ಎಂದು ಹೇಳಿದರು. ಅದು ನಮ್ಮ ಗಮನದಲ್ಲಿ ಬಂದಿಲ್ಲ. ಈಗ ಸದ್ಯಕ್ಕೆ ಎಗ್ ಬೋರ್ಡ ಮಾಡುವ ವಿಚಾರವಿಲ್ಲವೆಂದು ನಾನು ಹೇಳಿದ್ದೇನೆ. ಒಂದು ಕೋಳಿ ಮಾರಾಟ ನಿಗಮವನ್ನು ಸ್ಥಾಪಿಸುವ ವಿಷಯ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೇನೆ. ಅದರ ಉದ್ದೇಶಗಳನ್ನು ಹೇಳುತ್ತೇನೆ.

ಉದ್ದೇಶಗಳು:

1. ಗ್ರಾಮೀಣ ಪ್ರದೇಶದ ಸಣ್ಣ ಮತ್ತು ಅತಿ ಸಣ್ಣ ಕೋಳಿ ಸಾಕಾಣಿಕೆದಾರರಿಗೆ ಕೋಳಿ ಮತ್ತು ಕೋಳಿ ಉತ್ಪನ್ನಗಳ ಮಾರಾಟದ ವ್ಯವಸ್ಥೆಯನ್ನು ಮಾಡುವುದು.

2. ಕೋಳಿ ಸಾಕಾಣಿಕೆದಾರರಿಗೆ ಅವಶ್ಯವಿರುವ ಗುಣ ಮಟ್ಟದ ಕೋಳಿ ಮರಿ, ಆಹಾರ ಮುಂತಾದ ಎಲ್ಲಾ ಸಾಮಗ್ರಿಗಳನ್ನು ಒದಗಿಸಲು ವ್ಯವಸ್ಥೆ ಮಾಡುವುದು.

3. ಕೋಳಿ ಸಾಕಾಣಿಕೆದಾರರು ಉತ್ಪಾದಿಸಿದ ಕೋಳಿ ಉತ್ಪನ್ನಗಳನ್ನು ಶೇಖರಿಸಲು ಮತ್ತು ಪರಿಷ್ಕರಿಸಿ ಮಾರಾಟ ಮಾಡಲು ಉಗ್ರಾಣ ಶೇತಾಗಾರ ಪರಿಷ್ಕರಣ ಘಟಕ ಮತ್ತು ಸಾಕಾಣಿಕ ಸೌಲಭ್ಯ ಒದಗಿಸುವುದು.

4. ಕೋಳಿ ಸಾಕಾಣಿಕೆದಾರರಿಗೆ ಯಾವಾಗಲೂ ಲಾಭ ಸಿಗುವ ರೀತಿಯಲ್ಲಿ ಉತ್ಪನ್ನಗಳ ಬೆಲೆಗಳನ್ನು ನಿಗದಿಪಡಿಸಿ, ಉತ್ಪನ್ನಗಳನ್ನು ಖರೀದಿಸುವುದು ಹಾಗೂ ಗ್ರಾಹಕರಿಗೆ ನ್ಯಾಯವಾದ ಬೆಲೆಗಳಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುವುದು.

ಈ ಮೇಲಿನ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಪ್ರಾಥಮಿಕ ಕೋಳಿ ಸಾಕಾಣಿಕ ಸಹಕಾರ ಸಂಘಗಳನ್ನು ರಚಿಸಿ ನಂತರ ಕರ್ನಾಟಕ ಹಾಲು ಮಹಾ ಮಂಡಳಿಯ ಮಾದರಿಯಲ್ಲಿ ಸಂಸ್ಥೆಯನ್ನು ರಚಿಸಲಾಗುವುದು. ಈ ವ್ಯವಸ್ಥೆಯಿಂದ ಮಾರುಕಟ್ಟೆಯಲ್ಲಿರುವ ಖಾಸಗಿ ದಲ್ಲಾಳಿಗಳ ಶೋಷಣೆ ಕಡಿಮೆಯಾಗಿ ಮೊಟ್ಟೆ ಮತ್ತು ಕೋಳಿ ಉತ್ಪಾದನೆ ಮಾಡುವವರಿಗೂ ಹಾಗೂ ಬಳಕೆದಾರರಿಗೂ ಅನುಕೂಲ ವಾತಾವರಣ ಉಂಟಾಗಿ ಗ್ರಾಮಾಂತರ ಪ್ರದೇಶದಲ್ಲಿ ಈ ಉದ್ದಿಮೆ ಬೆಳೆಯಲು ಅನುವಾಗುವುದು.

ಶ್ರೀ ಕೆ.ಹೆಚ್. ಹನುಮೇಗೌಡ : ತಮ್ಮ ಉದ್ದೇಶವೇನೋ ಒಳ್ಳೆಯದು, ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ. ಇದು ಒಂದನೆಯದು ಎರಡನೆಯ ಪ್ರಶ್ನೆ ಇದು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ, ಬಡವರಿಗೆ ಉದ್ಯೋಗ ಒದಗಿಸುವ ದೃಷ್ಟಿಯಿಂದ, ಕೋಳಿ ಮತ್ತು ಕೋಳಿ ಉತ್ಪನ್ನಗಳನ್ನು ರೆಗ್ಯುಲೇಟ್ ಮಾಡಿ ಒಳ್ಳೆಯ ರೇಟ್ ಬಂದು ಲಾಭಾದಾಯಕವಾಗಿ ಮಾಡುವುದಕ್ಕೋಸ್ಕರ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇದು ಒಳ್ಳೆಯದು ಆದರೆ ಮೊನ್ನೆ ನನಗೆ ತಿಳಿದು ಬಂತು. ಹಾಸನ ಜಿಲ್ಲೆಯಲ್ಲಿ ಯಾರೋ ಒಬ್ಬ ಆಂಧ್ರಪ್ರದೇಶದ ದೊಡ್ಡ ವ್ಯಾಪಾರಿ ಇಪ್ಪತ್ತು ಕೋಟಿ ರೂಪಾಯಿ ದುಡ್ಡನ್ನು ಹಾಕಿ ಅಲ್ಲಿ ಪ್ರಾಜೆಕ್ಟ್‌ನ್ನು ಮಾಡುವುದಕ್ಕೆ ಜಮೀನನ್ನು ತೆಗೆದುಕೊಂಡು ವ್ಯವಸ್ಥೆ ಮಾಡುತ್ತಿದ್ದಾನೆಂದು ತಿಳಿದು ಬಂತು. ವ್ಯಾಪಾರಿ ಬಂದವರೇನು ದುಡ್ಡನ್ನು ವೈಟ್ ಮಾಡುವುದಕ್ಕೆ ಬರುತ್ತಾರೋ ಅಥವಾ ಯಾವ ಉದ್ದೇಶವಿಟ್ಟುಕೊಂಡು ಬರುತ್ತಾರೋ ಗೊತ್ತಿಲ್ಲ, ಅಂತೂ ಅದು ಸಕ್ಸಸ್ ಆದರೆ ಈ ಗ್ರಾಮೀಣ ಪ್ರದೇಶದಲ್ಲಿ ಬಡವರು 500-200-300-1000 ಕೋಳಿಗಳನ್ನು ಇಟ್ಟುಕೊಂಡು ಸಾವಿರಾರು ಜನರು ಜೀವಿನ ಮಾಡುತ್ತಿದ್ದಾರೆ. ಅವರ ಗತಿ ಏನು? ಆಗ ಅವರು ದೊಡ್ಡವರ ಮೇಲೆ ಕಾಂಪಿಟ್ ಮಾಡುವುದಕ್ಕಾಗುತ್ತದೆಯೇ? ಇದು ಎರಡನೆಯ ಪ್ರಶ್ನೆ ಈಗ ಇಂಡಸ್ಟ್ರೀಸ್ ಮಾಡುವಾಗ ಟಾಟಾ ಬಿರ್ಲಾರವರನ್ನು ಎತ್ತಿ ಆಕಾಶಕ್ಕೆ ಕೂರಿಸಿದ್ದರಿಂದ ಎಷ್ಟೋ ಲಕ್ಷಾಂತರ ಜನ ಸಣ್ಣ ಸಣ್ಣ ಉದ್ದಿಮೆಗಾರರೆಲ್ಲಾ ಈ ದೇಶದಲ್ಲಿ ನೆಗೆದುಬಿದ್ದು ಹೋದರು. ಅಂಥ ಒಂದು ಪ್ರವೃತ್ತಿ ಇಲ್ಲೂ ಕೂಡ ಬೆಳೆಯುವ ಹಾಗೆ ಕಾಣುತ್ತದೆ. ಹಾಗೇನಾದರೂ ಆಗುವುದಾದರೆ ಕೋಳಿಫಾರಂ ಮಾಡತಕ್ಕಂಥ ರೈತರ ಹಿತದೃಷ್ಟಿಯಿಂದ ಏನಾದರೂ ಕಾನೂನು ತಂದು ಅವರ ರಕ್ಷಣೆ ಮಾಡುತ್ತೀರಾ? ಆಮೇಲೆ ಈ ದೊಡ್ಡ ದೊಡ್ಡ ಕುಳಗಳು ದುಡ್ಡನ್ನು ಎಲ್ಲೆಲ್ಲೂ ಹೊಡೆದುಕೊಂಡು ಬಂದು ಬೆಳೆಯಲಿಕ್ಕೆ ಫೈಟ್ ಮಾಡಲಿಕ್ಕೆ ಹೊರಟವರಲ್ಲ ಅವರನ್ನು ಪ್ರಿವೆಂಟ್ ಮಾಡಲಿಕ್ಕೆ ಏನಾದರೂ ಸರ್ಕಾರದಲ್ಲಿ ಆಲೋಚನೆ ಇದೆಯೇ?

ಶ್ರೀ ಬಸವರಾಜ್ ಪಾಟೀಲ್: ಈಗಾಗಲೇ ದೊಡ್ಡ ದೊಡ್ಡ ಫಾರಂಗಳನ್ನು ಶ್ರೀಮಂತರು ತೆಗೆದು, ಈ ಬಡ ಕೋಳಿ ಸಾಕಾಣೆದಾರರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಶ್ರೀಮಂತರೂ ದೊಡ್ಡ ದೊಡ್ಡ ಫಾರಂಗಳನ್ನು ತೆಗೆಯುವುದನ್ನು ಬ್ಯಾನ್ ಮಾಡುವಂಥ ವಿಚಾರ ಸರ್ಕಾರದಲ್ಲಿ ಏನಾದರೂ ಇದೆಯೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಶ್ರೀಮಂತರು ದೊಡ್ಡ ದೊಡ್ಡ ಫಾರಂಗಳನ್ನು ತೆರೆಯಲಾರದಂತೆ ಏನು ಮಾಡಬೇಕೆಂದು ಸರ್ಕಾರದಲ್ಲಿ ಅದರ ಬಗ್ಗೆ ಪರಿಶೀಲನೆ ಮಾಡಿ ಅವಶ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ತಾವು ಕೋಳಿ ಮಾರಾಟ ಮಂಡಳಿ ಬಗ್ಗೆ ಹೇಳಲಿಲ್ಲ.

ಶ್ರೀ ಬಸವರಾಜ್ ಪಾಟೀಲ್ : ಬಡ್ಜೆಟ್‌ನಲ್ಲಿ ಹಣ ಇಡಲಾಗಿದೆ. ಅದಷ್ಟು ಬೇಗನೆ ಪ್ರಾರಂಭ ಮಾಡಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೋಳಿ ಮಾರಾಟ ಮಂಡಳಿಯನ್ನು ನೀವು ಮಾಡಲಿಕ್ಕೆ ಹೋಗಬೇಡಿ. ಎಗ್ ಬೋರ್ಡ್‌ನ್ನು ಮಾಡಲಿಕ್ಕೆ ಹೋಗಬೇಡಿ. ಇವುಗಳಿಂದ ಲಂಚ ಜಾಸ್ತಿಯಾಗುತ್ತದೆಯೇ ವಿನಃ ಬೇರೇನೂ ಆಗುವುದಿಲ್ಲ. ಈ ಬೋರ್ಡ್‌ಗಳ ಕತೆ ನಮಗಲ್ಲಾ ಗೊತ್ತಿದೆ. ಈ ಬೋರ್ಡ ಮಾಡುವ ಬದಲಾಗಿ, ಕೋಳಿ ಸಾಕುವವರಿಗೆ , ಕೋಳಿ ತಿನ್ನುವವರಿಗೆ ಅದನ್ನು ಬಿಟ್ಟುಬಿಡಿ, ಮಧ್ಯದಲ್ಲಿ ನೀವು ಕಾನೂನು ಮಾಡಲಿಕ್ಕೆ ಹೋಗಬೇಡಿ. ಪಾಪ, ನೀವು ಹೊಸದಾಗಿ ಬಂದಿದ್ದೀರಿ. ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ನನ್ನ ಸಲಹೆ ಏನೆಂದರೆ, ಈ ಕೋಳಿಗಳಿಗೆ ಬಹಳ ರೋಗ ಬರುತ್ತದೆ. ಅದಕ್ಕೆ ಕೊಡುವಂಥ ಇಂಜೆಕ್ಷನ್ ನಿಮ್ಮ ವೆಟರ್ನರಿ ಆಸ್ಪತ್ರೆಯಲ್ಲಿ ಇಟ್ಟರೆ ನಾವು ಬಹಳ ಕೃತಜ್ಞರಾಗಿರುತ್ತೇವೆ. ಅದನ್ನು ಇಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳು ಹೇಳಲಿ

ಶ್ರೀ ಬಸವರಾಜ ಪಾಟೀಲ್ : ಮಾನ್ಯ ವಿರೋಧ ಪಕ್ಷದ ಉಪನಾಯಕರು ಹೇಳಿದ ಪ್ರಕಾರ ಕೋಳಿಗಳಿಗೆ ಕೊಡುವ ಇಂಜಕ್ಷನ್ ನಮ್ಮ ಹತ್ತಿರ ಸಾಕಷ್ಟು ಇವೆ. ಇಷ್ಟು ವಿಶಾಸ್ವವನ್ನು ತಮಗೆ ಕೊಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ: ಕಳೆದ ಒಂದು ವರ್ಷದಿಂದ ಕೋಳಿ ಆಹಾರದ ಬೆಲೆ ಏರಿರುವುದರಿಂದ ಕೋಳಿ ಮೊಟ್ಟೆಗಳು ಮಾರ್ಕೆಟ್‌ನಲ್ಲಿ ಸಿಕ್ಕುತ್ತಿಲ್ಲ. ಮೊಟ್ಟೆಗಳ ಬೆಲೆ ಜಾಸ್ತಿಯಾಗಿದೆ. ಒಂದು ರೂಪಾಯಿಗೆ ಒಂದು ಮೊಟ್ಟೆಯಾಗಿದೆ. ಎಷ್ಟೋ ಜನರು ಕೋಳಿ ಸಾಕಾಣಿಕೆದಾರರು ಲಾಸ್ ಆಗುತ್ತದೆಂದು ಕೋಳಿ ಫಾರಮ್‌ಗಳನ್ನು ತೆಗೆದರು. ಕೋಳಿ ಸಾಕಾಣಿಕೆಗೆ ಈಗ ಬಹಳ ತೊಂದರೆಯಾಗಿದೆ. ಎಷ್ಟೋ ಕೋಳಿ ಫಾರಮ್‌ಗಳು ಮುಚ್ಚಿಹೋಗಿವೆ. ಕೋಳಿ ಆಹಾರ ಅವರಿಗೆ ಸರಿಯಾದ ಬೆಲೆಯಲ್ಲಿ ಸಿಕ್ಕಿ ಜನರಿಗೆ ಕೋಳಿಮೊಟ್ಟೆ ಸ್ವಲ್ಪ ಕಡಿಮೆ ಬೆಲೆಯಲ್ಲಿ ಸಿಕ್ಕುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ?

ಶ್ರೀ ಬಸವರಾಜ್ ಪಾಟೀಲ್ : ಮಾನ್ಯ ಸದಸ್ಯರ ವಿಚಾರವನ್ನು ಅದಷ್ಟು ಸಹಾನುಭೂತಿಯಿಂದ ಪರಿಶೀಲನೆ ಮಾಡಲಾಗುವುದು.

1990-91ನೇ ಸಾಲಿನಲ್ಲಿ ಮಂಜೂರಾದ ಹೊಸ ಪಶುವೈದ್ಯ ಶಾಲೆಗಳ ಸಂಖ್ಯೆ

2234 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?